


SHARANYA
SHIMOGA
ಸೇವೆಯಲ್ಲಿ ಪರಮಾತ್ಮನನ್ನು ಕಾಣು

## "ಶರಣ್ಯ"

ಈ ಆರೈಕೆ ಕೇಂದ್ರವು ಯಾವುದೇ ಫಲಾಪೇಕ್ಷೆ ಇಲ್ಲದೆ ಉಚಿತವಾಗಿ ಆರೈಕೆ ನೀಡುವ ನೋವು ಉಪಶಮನ ಕೇಂದ್ರ

- ಈ ಆರೈಕೆ ಕೇಂದ್ರವು ಪ್ರೀತಿ ಮತ್ತು ವಾತ್ಸಲ್ಯದ ದೇಗುಲವಾಗಿದೆ.
- ಒಳ ರೋಗಿಗಳಿಗೆ ಸಂಪೂರ್ಣ ಆರೈಕೆ
- ಗೃಹ ಭೇಟಿ ನೀಡುವ ಆರೈಕೆ
- ರೋಗಿ ಮತ್ತು ಕುಟುಂಬದವರಿಗೆ ಆಪ್ತ ಸಮಾಲೋಚನೆ
- ಆರೋಗ್ಯ ಸೇವಾಧಾರಿಗಳಿಗೆ ಶುಶ್ರೂಷೆಯ ತರಬೇತಿ

**ಡಿ.ಎಸ್.ಎಲ್. ಟ್ರಸ್ಟ್ (ರಿ.)**

"ಶರಣ್ಯ" ಗ್ರಾಮೀಣ ನೋವು ಉಪಶಮನ ಆರೈಕೆ ಮತ್ತು ಸಂಶೋಧನಾ ಕೇಂದ್ರ
(ಡಿ.ಎಸ್.ಎಲ್ ಟ್ರಸ್ಟ್ (ರಿ.)ನ ಸೇವಾ ಯೋಜನೆ ) ಶಿವಮೊಗ್ಗ
Ph: 08182-223366, 234366 Mob: +91 86189 96429 99457 76583

**ಆಡಳಿತ ಕಛೇರಿ**

"ಶರಣ್ಯ" ಗಾರ್ಡನ್ ಏರಿಯಾ, ಬಿ.ಹೆಚ್.ರಸ್ತೆ ತಿರುವು,
ಮಾಡ್ರನ್ ಟಾಕೀಸ್ ಎದುರು ರಸ್ತೆ, ಶಿವಮೊಗ್ಗ – 577 201 (ಕರ್ನಾಟಕ)

**ಒಳ ರೋಗಿಗಳ ಆರೈಕೆ ಕೇಂದ್ರ**

ಗಾಜನೂರು ಅಗ್ರಹಾರ, ಫಾರೆಸ್ಟ್ ಚೆಕ್ ಪೋಸ್ಟ್ ಹತ್ತಿರ
ಗಾಜನೂರು, ಶಿವಮೊಗ್ಗ (ಕರ್ನಾಟಕ)

# ಚಿಕಿತ್ಸೆಗೆ ಮೀರಿದ ಶುಶ್ರೂಷೆ ಮತ್ತು ಆರೈಕೆ

e-mail : sharanya_shimoga@rediffmail.com Web : www.sharanyahospice.org

## ಮುನ್ನುಡಿ :

ಶರಣ್ಯ ಸಂಸ್ಥೆಯು ಡಿ.ಎಸ್.ಎಲ್.ಟ್ರಸ್ಟ್(ರಿ.) ನ ಒಂದು ಸರ್ಕಾರೇತರ ಸೇವಾ ಸಂಸ್ಥೆ . ಈ ಸಂಸ್ಥೆಯು ಕರ್ನಾಟಕ ರಾಜ್ಯದ ಶಿವಮೊಗ್ಗದಲ್ಲಿ ಸ್ಥಾಪಿಸಲ್ಪಟ್ಟಿದೆ. ಉಲ್ಬಣ ಸ್ಥಿತಿಯಲ್ಲಿರುವ ಹಲವಾರು ಗಂಭಿರ ರೋಗಪಿಡಿತರಾಗಿರುವ, ಅಲ್ಪಾವದಿಯ ಸಾವಿನಂಚಿನಲ್ಲಿರುವವರಿಗೆ ಆರೈಕೆ ನೀಡುವ ಸೇವೆಯಲ್ಲಿ ನಿರತವಾಗಿದೆ. (ಕ್ಯಾನ್ಸರ್, ಸಂಪೂರ್ಣ ಪ್ಯಾರಾಲಿಸಿಸ್, ನರ ರೋಗಗಳು, ಮೆದುಳು ನಿಷ್ಕ್ರಿಯತೆ ಮತ್ತು ಇತರೆ ಗಂಭಿರ ಕಾಯಿಲೆಗಳು ಇತ್ಯಾದಿ) ಈ ಸೇವೆಯನ್ನು ಕಳೆದ 14 ವರ್ಷಗಳಿಂದ ಹಂತ ಹಂತವಾದ ಆನುಭವದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ರೋಗಿಗಳಿಗೆ ಆಪ್ತಸಮಾಲೋಚನೆ, ಸಾಂತ್ವಾನ ನೀಡುವುದು, ವೈದ್ಯರು ಮತ್ತು ಶುಶ್ರೂಷಕಿ ಯರ ತಂಡದೊಂದಿಗೆ ಉಲ್ಬಣಿಸಿದ ರೋಗಿಗಳ ಮನೆಗೆ ತೆರಳಿ ಶುಶ್ರೂಷೆ ಮತ್ತು ಆರೈಕೆ ನೀಡುತ್ತಾ ರೋಗಿಗಳ ಸೇವೆಯಲ್ಲಿ ಶಿವಮೊಗ್ಗ ಮತ್ತು ಹತ್ತಿರದ ಗ್ರಾಮಾಂತರ ಪ್ರದೇಶದಲ್ಲಿರುವ ರೋಗಿಗಳಿಗೆ ಸೇವೆ ನೀಡುತ್ತಾ ದಾಪುಗಾಲಿಟ್ಟು ಈಗ ಪ್ರಸ್ತುತ ಸುಸಜ್ಜಿತವಾದ ಆರೈಕೆ ಕೇಂದ್ರದಲ್ಲಿ ರೋಗಿಗಳಿಗೆ ಆಶ್ರಯ ನೀಡಿ ಸೇವೆಸಲ್ಲಿಸುವಲ್ಲಿ ಮುಂದೆಸಾಗಿರುತ್ತೇವೆ.




## ಒಂದು ಅವಲೋಕನ :

ಕೇಂದ್ರ ಸರ್ಕಾರದ ಇತ್ತೀಚಿನ ಒಂದು ಸಮೀಕ್ಷೆಯ ಮಾಹಿತಿ ಪ್ರಕಾರ ಇನ್ನಾವುದೇ ಚಿಕಿತ್ಸೆಯು ಫಲಕಾರಿಯಾಗದೆ, ಉಲ್ಬಣ ಸ್ಥಿತಿಯನ್ನು ತಲುಪಿ ಅಂತಿಮ ದಿನಗಳನ್ನು ಎಣಿಸುತ್ತಿರುವ ರೋಗಿಗಳ ಪ್ರಮಾಣ ಪ್ರತಿಶತ ಎರಡಕ್ಕಿಂತ ಹೆಚ್ಚಾಗುತ್ತಿದೆ ಎಂದು ತಿಳಿಸುತ್ತದೆ.

ಇಂತಹ ಪರಿಸ್ಥಿತಿಯ ಹಂತ ತಲುಪಲು ನಾನ ಕಾರಣಗಳಿರಬಹುದು ಉದಾಹರಣೆಗೆ ಮುಗ್ಧತೆ, ನಿರ್ಲಕ್ಷ , ಆರ್ಥಿಕ ತೊಂದರೆ, ಸಾಮಾಜಿಕ ಪರಿಸ್ಥಿತಿ, ರೋಗಿಯ ವರ್ತನೆ - ಸ್ವಭಾವ, ವೈದ್ಯಕೀಯ ಸೌಲಭ್ಯದ ಕೊರತೆ ಇತ್ಯಾದಿ.

ಇವೆಲ್ಲದರ ಪರಿಣಾಮ ರೋಗಿ ಗುಣಪಡಿಸಲಾಗದ ಉಲ್ಬಣಾವಸ್ಥೆಗೆ ತಲುಪುವುದು ಮತ್ತು ನೋವು - ಸಂಕಟ, ನರಳುವಿಕೆಯ ಅನುಭವ, ಮಾನಸಿಕ ಹಿಂಸೆ ಇತ್ಯಾದಿ. ಅತಿ ಮುಖ್ಯವಾಗಿ ಕುಟುಂಬದ ದೈನಂದಿಕ ಚಟುವಟಿಕೆಯ ಏರು ಪೇರು. ಈ ಪರಿಸ್ಥಿತಿಯನ್ನು ಸುಲಲಿತವಾಗಿ ನಿಭಾಯಿಸುವ ವಿಶೇಷ ವಿಧಾನವೇ ಉಪಶಮನ ಆರೈಕೆ. ಈ ಸೇವೆಯ ಅವಶ್ಯಕತೆ ರಾಷ್ಟ್ರದಾದ್ಯಂತ ಹೆಚ್ಚು ಅವಶ್ಯವಿರುವುದರಿಂದ, ಈಗಿರುವ ಬೆರಳೆಣಿಕೆಯ ಕೇಂದ್ರಗಳಿಗಿಂತ ಹೆಚ್ಚು ಕೇಂದ್ರಗಳು ಈ ಸೇವೆಯನ್ನು ನೀಡುವಂತಾಗಬೇಕಾಗಿದೆ. ಈ ನಿಟ್ಟಿನಲ್ಲಿ ಶರಣ್ಯದ ಸೇವಾ ಚಿಂತನೆ ಹರಿಸಲಾಗಿದೆ ಎಂದು ತಿಳಿಸಲು ಹೆಮ್ಮೆ ಎನಿಸುತ್ತದೆ.

## ಉದ್ದೇಶ ಮತ್ತು ಗುರಿ :

ವ್ಯಕ್ತಿಯು ತನ್ನ ಆರೋಗ್ಯದ ಸ್ಥಿತಿಯು ಇನ್ನಾವುದೇ ಚಿಕಿತ್ಸೆಗೆ ಗುಣವಾಗದೆ (ಮುಂಜಾಗ್ರತೆಯ ತಪಾಸಣೆ, ಚಿಕಿತ್ಸೆ ಮತ್ತು ವೈದ್ಯೋಪಚಾರದ ನಂತರವೂ) ಉಲ್ಬಣಾವಸ್ಥೆಗೆ ತಲುಪಿದಾಗ, ಅಂತಹ ರೋಗಿಗಳಿಗೆ ನಿರಂತರವಾದ ವೈದ್ಯಕೀಯ ಅರೈಕೆ, ಸಾಮಾಜಿಕ ಆರೈಕೆ, ಆಧ್ಯಾತ್ಮಿಕ ಆರೈಕೆ ಮತ್ತು ಮಾನಸಿಕ ಆರೈಕೆಯ ಅಗತ್ಯವಿರುತ್ತದೆ.

ಈ ರೀತಿ ಒಟ್ಟಾರೆ ಎಲ್ಲಾ ಆರೈಕೆ ಮತ್ತು ಪ್ರಿತಿ ವಿಶ್ವಾಸವನ್ನು ತೋರಿಸಿ ರೋಗಿಯನ್ನು ನೋಡಿಕೊಳ್ಳುವುದೇ ಉಪಶಮನ ಶುಶ್ರೂಷೆ ಮತ್ತು ಆರೈಕೆ ಎಂದು ಹೇಳಲಾಗುತ್ತದೆ. ಇಂತಹ ಒಂದು ವಿಧಾನದಿಂದ ನೊಂದರೋಗಿಯ ನರಳಾಟವನ್ನು ಕಡಿಮೆ ಗೊಳಿಸಿ ಇನ್ನುಳಿದ ಅವಧಿಯನ್ನು ಶಾಂತಿ ನೆಮ್ಮದಿಯಿಂದಿರಲು ಸಹಕರಿಸುವುದು ಮತ್ತು ಜೀವನದ ಅಂತಿಮ ದಿನಗಳ ಗುಣಮಟ್ಟವನ್ನು ಉತ್ತಮಗೊಳಿಸುವಿಕೆಯೇ ಈ ಸೇವೆಯ ಮೂಲ ಉದ್ದೇಶ.

ಇದರ ಜೊತೆಗೆ ರೋಗಿಯ ಕುಟುಂಬದವರಿಗೆ ಧೈರ್ಯ, ಸಾಂತ್ವಾನ ನೀಡಿ ಪರಿಸ್ಥಿತಿಯನ್ನು ನಿಭಾಯಿಸುವ ಮತ್ತು ಚೈತನ್ಯ ಪಡೆಯುವಲ್ಲಿ ಸಹಕರಿಸುವುದು. ಈ ವಿಧಾನದಿಂದ ಧನಾತ್ಮಕ ಚಿಂತನೆಯೊಂದಿಗೆ ರೋಗಿ ದಿನಕಳೆಯುವಲ್ಲಿ ಸಹಕಾರಿಯಾಗುವದಲ್ಲದೆ , ರೋಗಿಯ ನರಳಿದ ದಿನಗಳು ನೆನಪಾಗಿ ಮಾತ್ರ ಉಳಿಯುವಲ್ಲಿ ಸಹಕರಿಸುವುದು ಇದರ ಮತ್ತೊಂದು ಉದ್ದೇಶವಾಗಿದೆ.

ಈ ಸೇವೆಯು ಬಡವ - ಬಲ್ಲಿದ ನೆಂಬದೆ, ಜಾತಿ - ಧರ್ಮಗಳನ್ನು ಮೀರಿ ಎಲ್ಲ ವರ್ಗದ ಜನರಿಗೆ ಉಚಿತವಾಗಿ ಯಾವುದೇ ಫಲಾಪೇಕ್ಷೆ ಇಲ್ಲದೆ ಸೇವೆ ನೀಡುವ ಬೃಹತ್ ಗುರಿಯೊಂದಿಗೆ ಹೆಜ್ಜೆಯನ್ನು ಮುಂದಿಡುತ್ತಿದ್ದೇವೆ. ಈ ಗುರಿಯ ಸಾಧನೆಗೆ ಹೆಚ್ಚು ಜನರ ಸಹಕಾರ ಮತ್ತು ಪಾಲ್ಗೊಳ್ಳುವಿಕೆಯ ಅಗತ್ಯವನ್ನು ಅಪೇಕ್ಷಿಸುತ್ತೇವೆ.

ಶರಣ್ಯ ಈ ಸೇವೆಯನ್ನು ಕೆಲವು ಪ್ರಮುಖ ಆದ್ಯತೆಗಳೊಂದಿಗೆ ಕಾರ್ಯನಿರ್ವಹಿಸುತ್ತದೆ.

★ ರೋಗಿಯು ತನ್ನ ಆರೋಗ್ಯದ ಉಲ್ಬಣತೆಯ ಪರಿಸ್ಥಿತಿಯನ್ನು ಅರಿತು , ರೋಗವನ್ನು ಮೀರಿ ಎದುರಿಸುವ ಮಾನಸಿಕ ಧೈರ್ಯವನ್ನು ಪಡೆಯುವ ಪ್ರಯತ್ನ.

★ ರೋಗಿಯ ಉಳಿದ ದಿನಗಳು ಗೌರವಯುತವಾಗಿ, ಪ್ರಿತಿವಾತ್ಸಲ್ಯದ ಪರಿಸರದಲ್ಲಿ, ಉತ್ತಮ ಗುಣಮಟ್ಟದ ಜಿವನ ಕ್ರಮವನ್ನು ನೀಡುವ ಪ್ರಯತ್ನ.

★ ರೋಗಿಯು ಸ್ವಲ್ಪ ಸಮಯದ ನಂತರ ಕ್ಷಿಣಿಸುತ್ತಾ ಹೋಗುವ ಬಗ್ಗೆ ಸಾಮಾನ್ಯ ತಿಳುವಳಿಕೆ ಮತ್ತು ಮುನ್ಸುಚನೆಗಳ ಅರಿವು ನೀಡುವಲ್ಲಿ ಪ್ರಯತ್ನ ಪಡುವುದು .

**ಪ್ರಾರ್ಥಿಸುವ ತುಟಿಗಳಿಗಿಂತ ಸೇವೆ ಮಾಡುವ ಕೈಗಳೇ ಮುಖ್ಯ**

## ◆ ಸೇವಾ ವಿಧಾನ ಮತ್ತು ಸಂರಕ್ಷಣೆ :

ಇದುವರೆಗೆ ತಿಳಿಸಿದಂತೆ ಶಿವಮೊಗ್ಗ ಮತ್ತು ಅಸುಪಾಸಿನ ಪ್ರದೇಶಗಳಿಗೆ ಸೇವೆ ನೀಡುತ್ತಿದ್ದ ಶರಣ್ಯ ಸಂಸ್ಥೆಯು, ತನ್ನ ಸೇವಾ ವ್ಯಪ್ತಿಯನ್ನು ವಿಸ್ತರಿಸುವ ದೃಷ್ಟಿಯಿಂದ ಶಿವಮೊಗ್ಗ ನಗರದಿಂದ 10.00 ಕಿ.ಮೀ. ದೂರದಲ್ಲಿ ಸುಮಾರು 10.5 ಎಕರೆ ಪ್ರದೇಶವನ್ನು ಖರೀದಿಸಿ, ಬೃಹತ್ ಆರೈಕೆ ಕೇಂದ್ರವನ್ನು ನಿರ್ಮಿಸುವ ಸಂಕಲ್ಪ ಮಾಡಿದೆ. ಪ್ರಾಥಮಿಕ ಹಂತದಲ್ಲಿ 20 ರೋಗಿಗಳಿಗೆ ಆಶ್ರಯ ನೀಡುವ ವಾರ್ಡ್ ಮತ್ತು ಇತರೆ ಸೌಲಭ್ಯಗಳೊಂದಿಗೆ ಕಳೆದ ಎರಡು ವರ್ಷಗಳಿಂದ ಸೇವೆ ಸಲ್ಲಿಸಲಾಗುತ್ತಿದೆ.

ಈ ಸೇವೆಯ ಒಂದೊಂದು ಹೆಜ್ಜೆಯು ಬಹಳ ಜವಾಬ್ದಾರಿಯುತವಾಗಿದ್ದು, ಆಶ್ರಯದ ವಾಡ್‌ಗಳು, ಉಟೋಪಚಾರ, ಶುಶ್ರೂಷೆ, ವೈದ್ಯಕೀಯ ಸೌಲಭ್ಯ ಇತರೆ ಸೌಲಭ್ಯಗಳ ವ್ಯವಸ್ಥೆ, ಪೂರಕವಾಗಿ ಅಹ್ಲಾದಕರ ವಾತವರಣ ಸಿಬ್ಬಂದಿಗಳು ಮತ್ತು ಇತರೆ ಖರ್ಚು ವೆಚ್ಚಗಳು . ಬಹಳ ಮುಖ್ಯವಾಗಿ ಈ ಸೇವೆಯನ್ನು , ಸೇವೆಯಂದೇ ಪರಿಗಣಿಸಿ ವ್ಯವಹಾರಿಕವಾಗಬಾರದೆಂದು ಇದನ್ನು ಉಚಿತವಾಗಿ ನೀಡುವ ನಿರ್ಧರದಂತೆ ಮುನ್ನಡೆಯುತ್ತಿದೆ.

ಈ ಸೇವೆಯು ತುಂಬಾ ವಿಶೇಷ ಮತ್ತು ಮಾದರಿಯಾಗಿದೆ. ಶಿವಮೊಗ್ಗೆಯ ಸುಮಾರು ಹತ್ತು ಜಿಲ್ಲೆಗಳಿಗೆ ಇದೊಂದೇ ಈ ರೀತಿಯ ಆರೈಕೆ ನೀಡುವ ಕೇಂದ್ರವಾಗಿದೆ. ಒಳರೋಗಿಗಳಾಗಿ ಬಂದವರಿಗೆ ಪ್ರಾಥಮಿಕವಾಗಿ ವೈದ್ಯಕೀಯ ಆರೈಕೆ ನೀಡಿ ರೋಗಿಯ ಉಲ್ಬಣತೆಯ ನರಳುವಿಕೆ, ಸಂಕಟ ಮತ್ತು ನೋವು ಇತ್ಯಾದಿಗಳ ಅಡ್ಡಪರಿಣಾಮಗಳ ತೊಂದರೆಯನ್ನು ಕಡಿಮೆಗೊಳಿಸುವ ಪ್ರಯತ್ನಮಾಡಲಾಗುವುದು. ನಂತರ ಆಪ್ತಸಮಾಲೋಚನೆ, ಸಾಮಾಜಿಕ ಆರೈಕೆಯ ವಿಧಾನಗಳು, ಧಾರ್ಮಿಕ ಶುಶ್ರೂಷೆ ಮತ್ತು ಮಾನಸಿಕ ಆರೈಕೆಯನ್ನು ನೋಡಿ ರೋಗಿ ತನ್ನ ಪರಿಸ್ಥಿತಿಯನ್ನು ಒಪ್ಪಿಕೊಂಡು ರೋಗದ ಜೊತೆ ಜೀವಿಸುವುದನ್ನು ತಿಳಿಹೇಳುವ ಪ್ರಯತ್ನ ಮಾಡಲಾಗುತ್ತದೆ.

ಈ ಎಲ್ಲಾ ಸೇವೆಯ ಪ್ರಯತ್ನವೇ ...

★ ರೋಗಿಯ ಗೌರವಯುತ ಬದುಕು. ★ ನೋವುರಹಿತ ದಿನಗಳು . ★ ಗುಣಮಟ್ಟದ ಜೀವನ. ★ ಆಧ್ಯಾತ್ಮಿಕ ಚಿಂತನೆ. ★ ನಿರ್ಭಯ ಮಾನಸಿಕ ಸ್ಥಿತಿ.





## ನಮ್ಮ ಮನವಿ :

ರೋಗಿಯ ಉಲ್ಬಣ ಸ್ಥಿತಿಯ ಅಡ್ಡಪರಿಣಾಮಗಳಿಂದ ಪರಿಹಾರ ಪಡೆಯಲು ನಿರಂತರ ಆರೈಕೆಯ ಅಗತ್ಯವಿದೆ. ಔಷದೋಪಚಾರ, ರೋಗಿಯ ಒಂಟಿತನ ನಿವಾರಣೆ, ಕ್ರೀಡಾ ಪರಿಕರಗಳು, ರೋಗಿಯ ಕಲೆ ಮತ್ತು ಸಂಸ್ಕೃತಿಯ ಅಭಿರುಚಿಗೆ ಉತ್ತೇಜನ ಇತ್ಯಾದಿಗಳಿಗೆ ವ್ಯವಸ್ಥೆಮಾಡಲಾಗಿದೆ. ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹೆಚ್ಚಿನ ಆರ್ಥಿಕ ಸಹಾಯದ ಆಗತ್ಯವಿದೆ. ಶರಣ್ಯ ಸಂಸ್ಥೆಯು ದಾನಿಗಳ ಸಹಕಾರದಿಂದಲೇ ನಡೆಯುತ್ತಿದೆ.

**ಈ ನಿಟ್ಟಿನಲ್ಲಿ ತಾವುಗಳು ಉದಾರತೆಯಿಂದ ಅವಶ್ಯಕತೆ ಇರುವ ಹಲವಾರು ಸೌಲಭ್ಯಗಳಿಗೆ ಸಹಾಯ ಹಸ್ತ ನೀಡಿ ಎಂದು ವಿನಂತಿಸುತ್ತೇವೆ.**

- ★ ರೋಗಿಗಳ ವಾರ್ಡ್ ನಿರ್ಮಾಣಕ್ಕೆ
- ★ ಪ್ರತ್ಯೇಕ ಅಡುಗೆ ಮನೆ ಮತ್ತು ಊಟದ ಹಾಲ್.
- ★ ವಿಶೇಷ ಆರೈಕೆಯ ರೋಗಿಗಳಿಗೆ ಪ್ರತ್ಯೇಕ ಕೊಠಡಿಯ ನಿರ್ಮಾಣಕ್ಕಾಗಿ
- ★ ಉಪಶಮನ ಆರೈಕೆ ಮತ್ತು ಶುಶ್ರೂಷೆಯ ಬಗ್ಗೆ ಸಂಶೊಧನ ಕೇಂದ್ರ ನಿರ್ಮಾಣ.
- ★ ಆಧ್ಯಾತ್ಮಿಕ ಧ್ಯಾನ ಮಂದಿರ ನಿರ್ಮಾಣಕ್ಕೆ
- ★ ಪ್ರತ್ಯೇಕ ಶೌಚಾಲಯ ನಿರ್ಮಾಣಕ್ಕೆ
- ★ ನವಗ್ರಹ ವನ ಮತ್ತು ಔಷಧ ವನದ ನಿರ್ವಹಣೆಗೆ.
- ★ ಗೌರವ ಸದಸ್ಯರಾಗಬಹುದು.

ಪ್ರತಿ ತಿಂಗಳು ಈಗ ಹಾಲಿ 3.00 ರಿಂದ 4.00 ಲಕ್ಷ ರೂ.ಗಳ ನಿರಂತರ ನಿರ್ವಹಣಾ ವೆಚ್ಚ ತಗಲುತ್ತಿರುವುದರಿಂದ ಈ ವೆಚ್ಚವನ್ನು ಸರಿದೂಗಿಸಲು ದೇಣಿಗೆ ನೀಡಬಹುದು.


Recreation for Patients



Enterance


Visit of Justice Rama Jois

# ಆರೈಕೆ ಕೇಂದ್ರದ ಸೇವೆಯು ಭಗವಂತನ ಸೇವೆ

# ನಿಮ್ಮ ಅಮೂಲ್ಯ ದೇಣಿಗೆ ನೀಡಿ ...

ಕಂಪನಿಗಳ C.S.R. ದೇಣಿಗೆಗೆ ಅರ್ಹವಾದ ಸಾಮಾಜಿಕ ಸೇವಾ ಸಂಸ್ಥೆಯಾಗಿದೆ.

**ದೇಣಿಗೆ ನೀಡಲು ಬ್ಯಾಂಕಿನ ವಿವರಗಳು :**

## DSL TRUST (R), SHIVAMOGGA

**ANDHRA BANK** - A/c No. **095431043000018** IFSC. Code : **ANDB 0000954**

**LAKSHMI VILAS BANK** A/c No. **0672620000000750** IFSC Code : **LAVB 0000672**

Please pass a message of your donation to Mobile - **99457 76583**

* All monetary contributions are eligible for tax exemption under section 80G (50% tax exemption)

* Foreign contributions are accepted under FCRA